## ನಿಸ್ಪೋಢನೆ

# ಪಶ್ಚಿಮ ಘಟ್ಟ ಸಂರಕ್ಷಣೆ ಜಾರಿಗೆ ಇಚ್ಛಾಶಕ್ತಿ ಕೊರತೆಯೇ ಅಡ್ಡಿ

ಪಶ್ಚಿಮ ಘಟ್ಟಗಳ ಪರಿಸರವನ್ನು ಸೂಕ್ಷ್ಮ ಪ್ರದೇಶವೆಂದು ಗುರ್ತಿಸಿರುವ 'ಡಾ. ಕಸ್ತೂರಿರಂಗನ್' ವರದಿಯ ಅನುಷ್ಠಾನಕ್ಕೆ ಮತ್ತೊಮ್ಮೆ ಬೆನ್ನುಹಾಕಿರುವ ರಾಜ್ಯ ಸರ್ಕಾರದ ಕ್ರಮ ಹೊಣೆಗಾರಿಕೆಯಿಂದ ನುಣುಚಿಕೊಳ್ಳುವ– ಬೀಸುವ ದೊಣ್ಣೆಯಿಂದ ತಕ್ಷಣಕ್ಕೆ ತಪ್ಪಿಸಿಕೊಳ್ಳಬಯಸುವ– ರಾಜಕೀಯ ತಂತ್ರವಾಗಿದೆ.

ರಾಜ್ಯದ 20,668 ಚ.ಕಿ.ಮೀ. ಪ್ರದೇಶವನ್ನು ಪರಿಸರ ಸೂಕ್ಷ್ಮ ಪ್ರದೇಶ ಎಂದು ಕಸ್ತೂರಿರಂಗನ್ ವರದಿ ಗುರ್ತಿಸಿದೆ. ಈ ವರದಿಯನ್ನು ಅನುಷ್ಠಾನಗೊಳಿಸಿದಲ್ಲಿ 10 ಜಿಲ್ಲೆಗಳ, 33 ತಾಲ್ಲೂಕುಗಳ, 1499 ಗ್ರಾಮಗಳ ಲಕ್ಷಾಂತರ ಜನರು ತೊಂದರೆಗೆ ಸಿಲುಕಲಿದ್ದಾರೆ ಎನ್ನುವುದು ವರದಿ ಅನುಷ್ಠಾನದ ನಿರಾಕರಣೆಗೆ ಸರ್ಕಾರ ನೀಡಿರುವ ಕಾರಣ. ಸರ್ಕಾರದ ಸಮರ್ಥನೆ ಸರಿಯಾಗಿಯೇ ಇದೆ. ವರದಿ ಅನುಷ್ಠಾನದಿಂದ ತೊಂದರೆಗೊಳಗಾಗುವ ಸ್ಥಳೀಯ ಜನರು ವಿರೋಧ ವ್ಯಕ್ತಪಡಿಸುವುದು ಸರಿಯಾದುದೇ. ಆದರೆ, ಜನರಿಗೆ ತೊಂದರೆಯಾಗುತ್ತದೆಂದು ಯಥಾಸ್ಥಿತಿಯನ್ನು ಮುಂದುವರಿಸಿಕೊಂಡು ಹೋಗುವುದರಿಂದ ಉಂಟಾಗುವ ಅಪಾಯದ ಅಂದಾಜುಗಳನ್ನು ಸರ್ಕಾರ ಗಂಭೀರವಾಗಿ ತೆಗೆದುಕೊಂಡಂತಿಲ್ಲ. ಮಾಧವ ಗಾಡ್ಗೀಳ್ ಅಥವಾ ಕಸ್ತೂರಿರಂಗನ್ ವರದಿ ಅನುಷ್ಠಾನದಿಂದ ಪಶ್ಚಿಮ ಘಟ್ಟಗಳ ಪರಿಸರದ ಜನರಿಗೆ ತೊಂದರೆಯಾಗುವುದರಲ್ಲಿ ಅನುಮಾನವಿಲ್ಲ. ಆದರೆ, ವರದಿ ಅನುಷ್ಠಾನಗೊಳ್ಳದೆ, ಪರಿಸರ ಸೂಕ್ಷ್ಮ ಪ್ರದೇಶಗಳಲ್ಲಿ ಆಗುವ ವ್ಯತ್ಯಾಸದ ಪರಿಣಾಮ ಇಡೀ ದೇಶದ ಮೇಲಾಗುತ್ತದೆ.

ಯಾವುದೇ ಪ್ರದೇಶದಲ್ಲಿ ಪರಿಸರ ಸಂರಕ್ಷಣೆಗೆ ಮುಂದಾದಾಗ ಅಲ್ಲಿನ ಜನರಿಗೆ ತೊಂದರೆಯುಂಟಾಗುವುದು ಸಹಜ. ಅಂತಹ ಸಂದರ್ಭಗಳಲ್ಲಿ ಸೂಕ್ತ ನೆರವು ನೀಡಿ, ಸಂತ್ರಸ್ತರ ಬದುಕು ಗಾಸಿಗೊಳ್ಳದಂತೆ ರಕ್ಷಿಸುವುದು ಸರ್ಕಾರದ ಜವಾಬ್ದಾರಿ. ಜಲಾಶಯಗಳು ಅಥವಾ ಹೆದ್ದಾರಿ ನಿರ್ಮಾಣದ ಸಂದರ್ಭದಲ್ಲಿ ಜನರು ಆಸ್ತಿಪಾಸ್ತಿ ಕಳೆದುಕೊಂಡಾಗ, ಅವರಿಗೆ ಪುನರ್ವಸತಿ ಕಲ್ಪಿಸುವ, ಪರಿಹಾರ ನೀಡುವ ಪರಿಪಾಟ ಇದ್ದೇಇದೆ. ಈ ಪರಂಪರೆಯನ್ನು ಪಶ್ಚಿಮ ಘಟ್ಟಗಳ ಸಂದರ್ಭದಲ್ಲೂ ಅನುಸರಿಸಬಹುದಾಗಿತ್ತು. ಪರಿಸರಕ್ಕೆ ಅಪಾಯ ತಂದೊಡ್ಡುವ ಬೃಹತ್ ಉದ್ಯಮಗಳ ವಿರುದ್ಧ ಪ್ರತಿಭಟನೆಗಳು ನಡೆದಾಗ ರೂಪುಗೊಂಡ ಜನಾಂದೋಲನಗಳಿಗೆ ಬೆಲೆ ನೀಡಿರುವ ಸರ್ಕಾರಗಳು ಕಡಿಮೆ. ಆದರೆ, ಪರಿಸರ ಸಂರಕ್ಷಣೆಗೆ ಸಂಬಂಧಿಸಿದಂತೆ ವಿರೋಧ ಎದುರಾದಾಗ ಸರ್ಕಾರ ತನ್ನನ್ನು ಜನಪರವಾಗಿ ಗುರ್ತಿಸಿಕೊಳ್ಳುತ್ತದೆ. ಈ ವಿರೋಧಾಭಾಸಗಳ ಹಿಂದಿರುವ ಮನಸ್ಥಿತಿ ಸ್ಪಷ್ಟವಾಗಿದೆ; ಯಾವುದರಲ್ಲಿ ಲಾಭವಿದೆಯೋ ಅದನ್ನು ಜನವಿರೋಧವಿದ್ದರೂ ಸರ್ಕಾರ ಬೆಂಬಲಿಸುತ್ತದೆ.


'ಮನುಷ್ಯರನ್ನು ಹೊರಗಿಟ್ಟು ಕಸ್ತೂರಿರಂಗನ್ ವರದಿಯನ್ನು ಸಿದ್ಧಪಡಿಸಲಾಗಿದೆ' ಎನ್ನುವ ಮಾತುಗಳೂ ಇವೆ. ಹೀಗೆ ಆರೋಪಿಸುವವರು ಕಾಡಿನಂಚಿನಲ್ಲಿನ ಜನರ ಸಂಕಷ್ಟಗಳ ಒಂದು ಮುಖವನ್ನಷ್ಟೇ ಅರಿತಂತಿದೆ. ಪರಿಸರ ಸಂರಕ್ಷಣೆಯ ವರದಿಗಳ ಅನುಷ್ಠಾನಕ್ಕೆ ಅಡ್ಡಿಯಾಗಿ ಜನರನ್ನು ಬೆದರುಗೊಂಬೆಗಳಂತೆ ಬಿಂಬಿಸುತ್ತಿರುವವರು, ಅದೇ ಜನರ ಜೀವನದ ಸುಧಾರಣೆಗಾಗಿ ಸರ್ಕಾರ ಇಲ್ಲಿಯವರೆಗೆ ಏನೇನು ಮಾಡಿದೆ ಎನ್ನುವುದನ್ನು ಹೇಳಬೇಕು. ಬಹುತೇಕ ಪ್ರದೇಶಗಳಲ್ಲಿ ಕಾಡಿನಂಚಿನ ಜನರು, ಅರಣ್ಯ ಇಲಾಖೆ ಹಾಗೂ ಸರ್ಕಾರದ ಸಂವೇದನಾಶೂನ್ಯ ನಡವಳಿಕೆಯಿಂದಾಗಿ ಕಾಡಿಗೂ ದೂರವಾಗಿ, ನಾಡಿಗೂ ದೂರವಾಗಿ ತ್ರಿಶಂಕು ಸ್ಥಿತಿಯಲ್ಲಿದ್ದಾರೆ. ಇಂಥ ಜನರನ್ನು ಕಾಡಿನಲ್ಲೇ ಉಳಿಸುವುದು ಅಥವಾ ನಾಡಿನ ತೆಕ್ಕೆಗೆ ಸೇರಿಸುವುದು – ಎರಡೂ ಸಮಸ್ಯಾತ್ಮಕ ಸಂಗತಿಗಳೇ. ಹಾಗಾಗಿ, ಸ್ಥಳೀಯರ ಜೊತೆ ಚರ್ಚಿಸಿಯೇ ಅವರಿಗೆ ಅನುಕೂಲ ಆಗಬಹುದಾದ ಯೋಜನೆಯೊಂದನ್ನು ರೂಪಿಸುವುದು ಸರ್ಕಾರದ ಹೊಣೆಗಾರಿಕೆ. ಜನಸಾಮಾನ್ಯರು ಹಾಗೂ ಪರಿಸರ ತಜ್ಞರ ಅಭಿಪ್ರಾಯಗಳ ಬದಲಾಗಿ, ಜನಪ್ರತಿನಿಧಿಗಳು ಹಾಗೂ ಪರಿಸರದ ಸೂಕ್ಷ್ಮ ಸಂಗತಿಗಳನ್ನು ತಿಳಿಯದವರ ಅಭಿಪ್ರಾಯಗಳಿಗೆ ಸರ್ಕಾರ ಓಗೊಡುವುದು ಬಟ್ಟೆಯಲ್ಲಿ ಕೆಂಡವನ್ನು ಕಟ್ಟಿಕೊಂಡಂತೆ.

ಪ್ರೊ. ಮಾಧವ ಗಾಡ್ಗೀಳ್ ಹಾಗೂ ಕಸ್ತೂರಿರಂಗನ್ – ಎರಡೂ ವರದಿಗಳನ್ನು ಕೂಲಂಕಷವಾಗಿ ಅಧ್ಯಯನ ಮಾಡಿದವರು, ಮೊದಲ ವರದಿ ಎಷ್ಟು ಸಂಕೀರ್ಣವಾದುದು ಹಾಗೂ ಎರಡನೇ ವರದಿ ಎಷ್ಟು ಸರಳವಾದುದು ಎನ್ನುವುದನ್ನು ಈಗಾಗಲೇ ವಿಶ್ಲೇಷಿಸಿದ್ದಾರೆ. ಮಾಧವ ಗಾಡ್ಗೀಳ್ ವರದಿ ಜಾರಿಗೆ ಪ್ರಬಲ ವಿರೋಧ ಎದುರಾದ ಕಾರಣಕ್ಕೆ ಕಸ್ತೂರಿರಂಗನ್ ಸಮಿತಿ ನೇಮಿಸಲಾಗಿತ್ತು. ಆ ಸಮಿತಿ ನೀಡಿರುವ ವರದಿಯ ಸರಳವಾದ ಸಾಧ್ಯತೆಗಳನ್ನೂ ಅನುಷ್ಠಾನಕ್ಕೆ ತರುವುದು ಸಾಧ್ಯವಿಲ್ಲ ಎನ್ನುವುದಾದರೆ, ಪರಿಸರ ಸಂರಕ್ಷಣೆಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ಯಾವುದೇ ಇಚ್ಛಾಶಕ್ತಿ ಇಲ್ಲವೆಂದೇ ಭಾವಿಸಬೇಕಾಗುತ್ತದೆ. ವರದಿ ಅನುಷ್ಠಾನದ ನಿರಾಕರಣೆಗೆ ಸಂಬಂಧಿಸಿದಂತೆ ಎಲ್ಲ ರಾಜಕೀಯ ಪಕ್ಷಗಳೂ ಮೌನವಾಗಿವೆ ಹಾಗೂ ಯಾವ ರಾಜಕಾರಣಿಗೂ ಪರಿಸರ ಸಂರಕ್ಷಣೆ ಎನ್ನುವುದು ಆದ್ಯತೆಯ ವಿಷಯವಾಗಿಲ್ಲ.

ತಕ್ಷಣದ ಅನುಕೂಲ ಗಮನದಲ್ಲಿಟ್ಟುಕೊಂಡು ಮಾಧವ ಗಾಡ್ಗೀಳ್ ಅಥವಾ ಕಸ್ತೂರಿರಂಗನ್ ವರದಿಗಳನ್ನು ದೂರವಿಡಲು ಪ್ರಯತ್ನಿಸುವವರು, ಪ್ರಕೃತಿಯಲ್ಲಿನ ದೂರಗಾಮಿ ಪರಿಣಾಮಗಳ ಬಗ್ಗೆ ವೈಜ್ಞಾನಿಕ ನೆಲೆಗಟ್ಟಿನಲ್ಲಿ ಯೋಚಿಸುತ್ತಿಲ್ಲ. ಮುಂದಿನ ತಲೆಮಾರುಗಳ ಸೌಖ್ಯದ ಬಗ್ಗೆ ಕಾಳಜಿಯಿದ್ದುದೇ ಆದರೆ, ಸದ್ಯದ ಸವಾಲುಗಳಿಗೆ ನಾವು ಎದೆಗೊಡಲೇಬೇಕು.

■ ರಘುನಾಥ ಚ.ಹ.

ಮಾಧವ ಗಾಡ್ಗೀಳ್ ಅಥವಾ ಕಸ್ತೂರಿರಂಗನ್ ವರದಿ ಅನುಷ್ಠಾನದಿಂದ ಪಶ್ಚಿಮ ಘಟ್ಟಗಳ ಪರಿಸರದ ಜನರಿಗೆ ತೊಂದರೆಯಾಗುವುದರಲ್ಲಿ ಅನುಮಾನವಿಲ್ಲ. ಆದರೆ, ವರದಿ ಅನುಷ್ಠಾನಗೊಳ್ಳದೆ, ಪರಿಸರ ಸೂಕ್ಷ್ಮ ಪ್ರದೇಶಗಳಲ್ಲಿ ಆಗುವ ವ್ಯತ್ಯಾಸದ ಪರಿಣಾಮ ಇಡೀ ದೇಶದ ಮೇಲಾಗುತ್ತದೆ.



ಈಶ್ವರ್